ದಿಃ 18.12.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು 1 ಮತ್ತು 8 ಪ್ರತಿವಾದಿಪರ ಶ್ರೀ ಬಿಜಿಎಸ್ ವಕೀಲರಿಂದ

ನಾನು ಐರಿನ್ ಡಿಸಿಲ್ವ ರವರ ಪರವಾಗಿ ಸಾಕ್ಷಿ ಹೇಳುತ್ತಿಲ್ಲ. ನಾನು ಮತ್ತು ಐರಿನ್ ಡಿಸಿಲ್ವ ಇಬ್ಬರೂ ಜೊತೆಯಾಗಿ ಕೇಸು ಹಾಕಿದ್ದೇವೆ ಅಂದರೆ ಸರಿ. ದಾವೆಯನ್ನು ನಾನು ಮಾತ್ರ ಹಾಕಿದ್ದೇನೆ. ವಕೀಲರಿಗೆ ಕೇಸು ಹಾಕಲು ಮಾಹಿತಿ ಕೊಟ್ಟದ್ದು ನಾನು ಮಾತ್ರ. ದಾವೆಯನ್ನು ಮಾಡುವ ಸಮಯದಲ್ಲಿ ಯಾರೆಲ್ಲಾ ಪ್ರತಿವಾದಿಯರು ಇದ್ದಾರೆಂದು ತಿಳಿದುಕೊಂಡು ಸಹಿ ಮಾಡಿದ್ದೇನೆ. ಆದರೆ ಐರಿನ್ ಡಿಸಿಲ್ವ ರವರು ನನ್ನೊಟ್ಟಿಗೆ ದಾವೆ ಸಲ್ಲಿಸಿದ್ದಾರೆ. ಕೇಸಿನಲ್ಲಿ ಎದುರು ಪಕ್ಷಗಾರರು ಏಒನು ಸಾದ,ನೆ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಅವರು ಏನೆಲ್ಲಾ ದಾಖಲೆಗಳನ್ನು ನೀಡಿದ್ದಾರೆಂದು ತಿಳಿದುಕೊಂಡಿದ್ದೇನೆ.

ಈ ವ್ಯಾಜ್ಯ ಮಾಡುವ ಪೂರ್ವದಲ್ಲಿ ಇನ್ನೊಂದು ದಾವೆ 161/1999 ಇತ್ತು. ಈ ದಾವೆಯಲ್ಲಿ ಸೇರಿರುವ 4 ಭೂಮಿಗಳಿಗೆ ಸಂಬಂಧಿಸಿದಂತೆ ಅಸಲುದಾವೆ 161/1999 ರಲ್ಲಿ ಸಂಬಂಧಪಟ್ಟಿದ್ದು ಇರುತ್ತದೆ. ಕಿರಿಯ ವಿಭಾಗ ಬಂಟ್ವಾಳ ಇನ್ನೊಂದು ದಾವೆ 164/1999 ಇತ್ತು. ಅದರಲ್ಲಿ ತುಂಬಾ ಸರ್ವೆ ನಂಬರ್ ಗಳು ಇತ್ತು. ಆ ಭೂಮಿಗಳನ್ನು ಈ ವ್ಯಾಜ್ಯದಲ್ಲಿ ಸೇರಿಸಿದ್ದೇವೆ. ದಾವಾ ಜಮೀನಿನಲ್ಲಿ ಸಂಬಂಧಸಿದಂತೆ ಇದಲ್ಲದೆ ಮೇಲೆ ಹೇಳಿದ ಎರಡು ದಾವೆಗಳು ಇದ್ದವು. ಸದರಿ ದಾವೆಗಳಲ್ಲಿ ಏನು ಹುಕುಂ ಆಗಿದೆ ಎಂದು ದಾಖಲೆಗಳನ್ನು ಹಾಜರುಪಡಿಸಬಹುದು.

ಓ.ಎಸ್ 63-2011 ರಂತೆ ಈ ಭೂಮಿಗಳಿಗೆ ಸಂಬಂಧಿಸಿದಂತೆ ಇತ್ತು ಅಂದರೆ ನನಗೆ ನೆನಪಿಲ್ಲ. ಮೇಲೆ ಹೇಳಿದ ಎಲ್ಲಾ ದಾವೆಗಳಲ್ಲಿ ಮೇಲೆ ಹೇಳಿದ ಎಲ್ಲಾ ಪಾರ್ಟಿಗಳನ್ನು ಸೇರಿಸಿದ್ದೇವೆ. ಈ ವ್ಯಾಜ್ಯದಲ್ಲಿ ತೋರಿಸಿದ ಐಟಂ ನಂಬರ್ 66/4 ಬಿ 98 ಸೆಂಟ್ಸ್ 66/4 ಎ 40 ಸೆಂಟ್ಸ್ ಭೂಮಿಗಳು ಯಾರಿಗೆ ಹೇಗೆ ಬಂದಿವೆ ಎಂದು ತಿಳಿದುಕೊಂಡಿದ್ದೇನೆ. ಸದರಿ ಭೂಮಿಗಳನ್ನು ಕಾಮಿಲ್ ಡಿಸೋಜ ಖರೀದಿಸಿದ್ದರು. ಸದರಿ ಖರೀದಿಸಿದ ಜಮೀನುಗಳಿಗೆ ಖರೀದಿ ಪತ್ರ ಇರುತ್ತದೆ. ಈ ಸರ್ವೆನಂಬರ್ ಗಳಿಗೆ ಸಬಂಧಿಸಿದಂತೆ ನನ್ನ ತಂದೆ ಪ್ಯಾಟ್ರಿಕ್ ಡಿಸಿಲ್ವ ರವರು ಒನರ್ ಎಂದು ಹುಕುಂ ಆಗಿರುತ್ತದೆ. ಹುಕುಂ ಪ್ರತಿ ನನ್ನ ಬಳಿ ಇದೆ. ಆ ಬಗ್ಗೆ ಈ ದಾವೆಯಲ್ಲಿ ತಿಳಿಸಿರುವುದಿಲ್ಲ ಆ. ಆ ಬಾಬ್ತು ದಾಖಲೆಗಳನ್ನು ಕೇಸು ಮಾಡುವಾಗ ವಕೀಲರಿಗೆ ಕೊಟ್ಟಿರುತ್ತೇನೆ.

ಸದರಿ ಭೂಮಿಗಳಲ್ಲಿ ಅಪ್ಪನಿಗೆ ಅಲ್ಲದೇ ಬೇರೆಯವರಿಗೆ ಹಕ್ಕಿಲ್ಲ ಎಂದು ಪ್ರತಿವಾದಿಯವರು ಒಪ್ಪಿಕೊಂಡಿದ್ದಾರೆ. ತಂದೆ ಖರೀದಿ ಮಾಡಿದ ಭೂಮಿ ಅವರ ಸ್ವಾಧೀನದಲ್ಲಿತ್ತು. 7 ನೇಪ್ರತಿವಾದಿ ಫ್ಲೋರೀನ್ ಡಿಸಿಲ್ವ ರವರಿಗೆ ನಮ್ಮ ತಂದೆಯವರು 1 ಮತ್ತು 2 ನೇ ಅನುಸೂಚಿ ಸ್ವತ್ತನ್ನು ನೀಡಿದ್ದಾರೆಂದು ಹೇಳಿದ ವಿಚಾರವನ್ನು ತಿಳಿದುಕೊಂಡಿದ್ದೀರಾ ಅಂದರೆ ಸಾಕ್ಷಿ ಹಾಗೇ ಅವರು ಯಾವುದೇ ಭೂಮಿ ಕೊಟ್ಟಿಲ್ಲ ಎನ್ನುತ್ತಾರೆ.

ಫ್ಲೋರೀನ್ ಡಿಸಿಲ್ವ ರವರು ಸುಮಾರು 60 ವರ್ಷದಿಂದ ಬಾಂಬೆಯಲ್ಲಿ ವಾಸ್ತವ್ಯ ಇದ್ದಾರೆ. ಅವರರಿಗೆ ಯಾವುದೇ ಕೆಲಸ ಇಲ್ಲ. ಅವರ ಗಂಡ ಕೆಲಸದಲ್ಲಿ ಇದ್ದರು. ಅವರ ಗಂಡ ತೀರಿಕೊಂಡು ಸುಮಾರು 40 ವರ್ಷಗಳಾಗಿರುತ್ತದೆ. ಸಾಯುವ ಮೊದಲು ಅವರ ಗಂಡ 10 ರಿಂದ 15 ವರ್ಷ ಮಲಗಿದಲ್ಲೇ ಇದ್ದರು ಅಂದರೆ ನನಗೆ ಗೊತ್ತಿಲ್ಲ. ಅವರಿಗೆ ಪ್ಯಾರಲಿಸಿಸ್ ಅಗಿದೆ ಎಂಬ ವಿಚಾರ ಗೊತ್ತು. ಪ್ಯಾರಲಿಸಿಸ್ ಆದ ನಂತರ 15 ವರ್ಷ ಮಲಗಿದಲ್ಲೇ ಇದ್ದರು ಅಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ಅವರಿಗೆ ಚಿಕಿತ್ಸೆ ಯಾರು ನೆರವು ಕೊಡುತ್ತಿದ್ದರು ಎಂದು ನಾವು ಚಿಕ್ಕವರಿದ್ದಕಾರಣ ನನಗೆ ಗೊತ್ತಿಲ್ಲ. 7 ನೇಪ್ರತಿವಾದಿಗೆ 4 ಜನ ಮಕ್ಕಳು . ಪ್ಯಾರಲಿಸಿಸ್ ಆದ ಸಮಯದಲ್ಲಿ ಅವರ ಮಕ್ಕಳು ಚಿಕ್ಕವರಿದ್ದರು ಎಂದು ಗೊತ್ತಿಲ್ಲ. ಅವರ ಆರ್ಥಿಕ ಜೀವನ ಕಷ್ಟದಲ್ಲಿದ್ದ ಕಾರಣ ತಂದೆಯವರು ಅವರಿಗೆ ನೀಡಿದ್ದರು ಅಂದರೆ ಸರಿಯಲ್ಲ. 7 ನೇ ಪ್ರತಿವಾದಿ ಮತ್ತು ಅವರ ಮಕ್ಕಳನ್ನು ನಮ್ಮ ತಂದೆಯವರೇ ನೋಡಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ. ಸದರಿ ಭೂಮಿಗಳು ಈಗಲೂ ಕೂಡ ಅವರ ಸ್ವಾಧೀನದಲ್ಲಿದೆ ಅಂದರೆ ಅದರಲ್ಲಿ ಇನ್ನು ಡಿವೈಡ್ ಆಗಿಲ್ಲ ಎನ್ನುತ್ತಾರೆ.

ಸದರಿ ಭೂಮಿಯಲ್ಲಿ ನನ್ನ ತಮ್ಮ ಜಿಯೋ ಡಿಸಿಲ್ವ ಗಣಿಗಾರಿಕೆ ಮಾಡುತ್ತಿದ್ದಾರೆ. ಆ ಬಗ್ಗೆ ನಮ್ಮ ವಕೀಲರಿಗೆ ದಾವೆ ಹಾಕಿಸುವಾಗ ಹೇಳಿದ್ದೇನೆ. ಆ ಬಗ್ಗೆ ದಾಖಲೆಗಳನ್ನು ವಕೀಲರ ಬಳಿ ಕೊಟ್ಟಿದ್ದೇವೆ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ಬರೆಸಿಲ್ಲ. ಸಾಕ್ಷಿ ಪುನಃ ಆ ಭೂಮಿಗಳು ಬೇರೆ ಎನ್ನುತ್ತಾರೆ. ಸದರಿ ಭೂಮಿಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ಗಣಿಗಾರಿಕೆ ಮಾಡಿದ ಭೂಮಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮೂಂದೂಡಲಾಯಿತು.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಬಂಟ್ವಾಳ.